1 ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**
**ಸಿಸಿ ನಂಬರು** 784–2022

ಡಿ.ಡಬ್ಲ್ಯೂ.-1

**ಪ್ರಮಾಣೀಕರಿಸಿದ ದಿನಾಂಕ:**05.03.2026.

ಪಾಟೀ ಸವಾಲು:- ಪಿರ್ಯಾದುದಾರರ ಪರ ಶ್ರೀ ಆರ್.ಹೆಚ್.ಬಿ. ವಕೀಲರಿಂದ

1. ನಾನು ಬಿ.ಎ. ಪದವೀಧರ. ನಾನು ಬರೂರು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಸುಮಾರು 7 ವರ್ಷಗಳಿಂದ ಕೆಲಸ ಮಾಡಿರುತ್ತೇನೆ. ನನಗೆ ಸದರಿ ಸಹಕಾರ ಸಂಘದಲ್ಲಿ 15,000/- ರೂಗಳ ಸಂಬಳವಿತ್ತು. ನಮ್ಮ ಮನೆಯಲ್ಲಿ ನಾವು 5 ಜನ ಇರುತ್ತೇವೆ, ನಾನು ನನ್ನ ತಾಯಿ, ನನ್ನ ಹೆಂಡತಿ ಮತ್ತು ನನ್ನ ಇಬ್ಬರು ಮಕ್ಕಳು. 2001 ರಿಂದ 2015 ರವರೆಗೆ ಸಹಕಾರ ಸಂಘದಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದೆ. 2015 ರಿಂದ 2022 ರವರೆಗೆ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ಬರೂರು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಾನು ಹಣ ದುರುಪಯೋಗ ಪಡಿಸಿಕೊಂಡೆ ಎಂದು ನನ್ನನ್ನು ಕೆಲಸದಿಂದ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಹಕಾರ ಸಂಘದ 58 ಲಕ್ಷ ರೂಗಳ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದೇನೆಂದು ನನ್ನ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

2. ನನ್ನ ವಿರುದ್ಧ ಸಾಗರದ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಚೆಕ್ ಬೌನ್ಸ್ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ನನಗೆ ಶಿಕ್ಷೆಯಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಚೆಕ್ ಬೌನ್ಸ್ ಪ್ರಕರಣವನ್ನು ಮೇಘರಾಜ್ ಎಂಬುವವರು ಸಲ್ಲಿಸಿದ್ದರು. ಮೇಘರಾಜ್ ರವರು ಮೂಲತಃ ಬರೂರು ಗ್ರಾಮದವರೇ ಆಗಿರುತ್ತಾರೆ. ಪಿರ್ಯಾದುದಾರರು ಅರಣ್ಯ ಇಲಾಖೆಯಲ್ಲಿ ಫಾರೆಸ್ಟ್ ಗಾರ್ಡ್ ಆಗಿ ಕಾರ್ಯ ನಿರ್ವಹಿಸಿ ನಿವೃತ್ತಿ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದುದಾರರಿಗೆ ಜಮೀನು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಪಿರ್ಯಾದುದಾರರು ಬರೂರು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಜಮೀನಿನ ಮೇಲೆ ಸಾಲವನ್ನು ಪಡೆದಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನೇ ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿದ್ದೆ ಎಂದರೆ ಸರಿ. ಪಿರ್ಯಾದುದಾರರ ಪರಿಚಯ ನಿಮಗೆ ಇದೆ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ಸಾಲಕ್ಕೆ ಅರ್ಜಿ ನೀಡಿದ್ದರು, ಆ ಆಧಾರದ ಮೇಲೆ ಪರಿಚಯವಿರುತ್ತಾರೆ ಎಂದು ನುಡಿಯುತ್ತಾರೆ.

3. ಪಿರ್ಯಾದುದಾರರು ನನಗೆ ನಾನು 10-15 ವರ್ಷದವನಿದ್ದಾಗಿನಿಂದಲೂ ಪರಿಚಯವಿರುತ್ತಾರೆ. ಪಿರ್ಯಾದುದಾರರು ನನಗೆ ಯಾವುದೇ ಸಾಲವನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು 2013, 2015, 2016 ರಲ್ಲಿ ನಾನು ಪಿರ್ಯಾದುದಾರರಿಂದ 50 ಸಾವಿರ ರೂಗಳ ಸಾಲವನ್ನು ಪಡೆದು ಅದನ್ನು ಅವರಿಗೆ ಹಿಂದಿರುಗಿಸಿದ್ದೇನೆ. ಸಾಲದ ಹಣವನ್ನು ನಗದಾಗಿ ಪಿರ್ಯಾದುದಾರರಿಗೆ ನೀಡಿರುತ್ತೇನೆ. ಪಿರ್ಯಾದುದಾರರು ನನಗೆ ಸಾಲದ ಹಣವನ್ನು 2013 ರಲ್ಲಿ ನಗದಾಗಿಯೇ ಆ ಸಮಯದಲ್ಲಿ ನೀಡಿದ್ದರು. ನಾನು ಪಿರ್ಯಾದುದಾರರಿಂದ 2013 ರಲ್ಲಿ ಸಾಲವನ್ನು ಪಡೆಯುವಾಗ ಸಹಿ ಮಾಡಿದ ಖಾಲಿ ಚೆಕ್ ಅನ್ನು ನೀಡಿದ್ದೆ. ನಾವು ನಮ್ಮ ಸಹಕಾರ ಸಂಘಕ್ಕೆ ಬರುವ ಗ್ರಾಹಕರಿಗೆ ಚೆಕ್ ಅನ್ನು ನೀಡುವಾಗ ಅದರಲ್ಲಿ ಮೊತ್ತದ ಬರವಣಿಗೆಯನ್ನು ಮಾಡಿಯೇ ಚೆಕ್ ಅನ್ನು ನೀಡುತ್ತೇವೆ ಎಂದರೆ ಸರಿ.

4. ಚೆಕ್ ಮತ್ತು ಅದರ ಬರವಣಿಗೆಯ ಕುರಿತು ನನಗೆ ಸಾಮಾನ್ಯವಾದ ಜ್ಞಾನ ಇರುತ್ತದೆ. 2013 ರಲ್ಲಿ ನಾನು ಪಿರ್ಯಾದುದಾರರಿಂದ ಸಾಲವನ್ನು ಪಡೆಯುವಾಗ ಯಾವುದೇ ಒಪ್ಪಂದ ಪತ್ರವನ್ನು ಮಾಡಿಕೊಂಡಿರಲಿಲ್ಲ. ಪಿರ್ಯಾದುದಾರರು ಈ ಪ್ರಕರಣದ ಚೆಕ್ ಗೆ ಸಂಬಂಧಿಸಿದಂತೆ ನೀಡಿದ ನೋಟೀಸ್ ಗೆ ನಾನು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನೋಟೀಸ್ ಬಂದಾಗ ನನಗೆ ಆರೋಗ್ಯ ಸರಿ ಇಲ್ಲದೇ ಆಸ್ಪತ್ರೆಗೆ ದಾಖಲಾಗಿದ್ದೆ ಎಂದು ನುಡಿಯುತ್ತಾರೆ. ನಾನು ಭದ್ರತೆಗಾಗಿ ಪಿರ್ಯಾದುದಾರರಿಗೆ ನೀಡಿದ ಚೆಕ್ ಅನ್ನು ಸಾಲ ತೀರಿಸಿದ ನಂತರವೂ ಪಿರ್ಯಾದುದಾರರು ಹಿಂದಿರುಗಿಸದೇ ಇದ್ದಾಗ ಸದರಿ ಚೆಕ್ ಗೆ ಸಂಬಂಧಿಸಿದಂತೆ ಬ್ಯಾಂಕಿಗೆ ಚೆಕ್ ಅನ್ನು ಹಾಜರುಪಡಿಸಿದರೆ ಪಾವತಿಯನ್ನು ತಡೆ ಹಿಡಿಯುವಂತೆ ಕೋರಿ ನಾನು ಬ್ಯಾಂಕಿಗೆ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲ.

5. 2017 ರಲ್ಲಿ ನಾನು ಆರೋಗ್ಯವಾಗಿಯೇ ಇದ್ದೆ. ನಾನು ಭದ್ರತೆಗಾಗಿ ನೀಡಿದ ಚೆಕ್ ಅನ್ನು ಪಿರ್ಯಾದುದಾರರು ಹಿಂದಿರುಗಿಸದೇ ಇದ್ದಾಗ ನಾನು ಪೊಲೀಸ್ ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರಲಿಲ್ಲ, ಪಿರ್ಯಾದುದಾರರ ಮೇಲೆ ವಿಶ್ವಾಸ ಇದ್ದುದರಿಂದ ದೂರನ್ನು ನೀಡಲಿಲ್ಲ. ಈ ಪ್ರಕರಣ ದಾಖಲಾಗುವವರೆಗೂ ನನಗೆ ಪಿರ್ಯಾದುದಾರರ ಮೇಲೆ ವಿಶ್ವಾಸವಿತ್ತು. ನಾನು ಸಹಕಾರ ಸಂಘದಲ್ಲಿ ಅನೇಕ ರೈತರ ಹೆಸರಿನಲ್ಲಿ ಸಾಲವನ್ನು ಪಡೆದು, ಆ ಹಣವನ್ನು ದುರುಪಯೋಗಪಡಿಸಿಕೊಂಡಿರುವುದರಿಂದ ನನ್ನ ವಿರುದ್ಧ ವಿಚಾರಣೆ ಆಗಿರುತ್ತದೆ ಎಂದರೆ ಸರಿಯಲ್ಲ. ದುರುಪಯೋಗಪಡಿಸಿಕೊಂಡೆ ಎಂಬ ಕಾರಣದಿಂದಲೇ ನನ್ನನ್ನು ಕೆಲಸದಿಂದ ವಜಾಗೊಳಿಸಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಯು ಮುಂದುವರೆದು ನನ್ನ ವೈಯಕ್ತಿಕ ಕಾರಣದಿಂದ ಕೆಲಸವನ್ನು ನಾನೇ ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸಂಘದಲ್ಲಿ ನಾನು ದುರುಪಯೋಗಪಡಿಸಿಕೊಂಡ ಹಣವನ್ನು ತೀರಿಸುವ ಸಲುವಾಗಿ ಕೃಷಿ ಜಮೀನುಗಳನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಹಕಾರ ಸಂಘದ ದುರುಪಯೋಗಪಡಿಸಿಕೊಂಡ ಹಣವನ್ನು ತೀರಿಸುವ ಸಲುವಾಗಿ ನಾನು ಅನೇಕ ಜನರ ಬಳಿ ಕೈ ಸಾಲ ಮಾಡಿರುತ್ತೇನೆ ಎಂದರೆ ಸರಿಯಲ್ಲ.

6. ನಾನು ಆಸ್ಪತ್ರೆಯಲ್ಲಿ 3 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ. ದಿ:12.02.2022 ರಂದು ಆಸ್ಪತ್ರೆಗೆ ದಾಖಲಾಗಿ ದಿ:15.02.2022 ರಂದು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿರುತ್ತೇನೆ. ದಿ:18.01.2022 ರಂದು ಹಸು ಅಡ್ಡ ಬಂದ ಕಾರಣ ಸಂಜೆ 5 ಗಂಟೆ ಸಮಯದಲ್ಲಿ ನಾನು ದ್ವಿ ಚಕ್ರ ವಾಹನದಿಂದ ಬಿದ್ದಿದ್ದೆ. ನಾನು 2 ಸಲ ದ್ವಿ ಚಕ್ರ ವಾಹನದಿಂದ ಬಿದ್ದಿರುತ್ತೇನೆ. ನಾನು ಹಾಜರುಪಡಿಸಿರುವ ನಿಡಿ 2 ದಾಖಲೆಯಲ್ಲಿ ದಿ:17.01.2022 ಮತ್ತು 01.02.2022 ರಂದು ಅಪಘಾತವಾಗಿರುವುದಾಗಿ ನಮೂದನೆ ಇರುತ್ತದೆ ಎಂದರೆ ಸರಿ. ದಿ:17.01.2022 ರಂದು ನಾನು ಸಹಕಾರ ಸಂಘದಲ್ಲಿ ಕೆಲಸ ಮಾಡುತ್ತಿದ್ದೆ. 2022 ರ ಜೂನ್ ತಿಂಗಳಿನವರೆಗೂ ನಾನು ಸಹಕಾರ ಸಂಘದ ಕೆಲಸಕ್ಕೆ ರಜೆ ಹಾಕಿದ್ದೆ. ನಾನು ರಜಾ ಹಾಕಿರುವ ಕುರಿತಾದ ದಾಖಲೆ ಸಹಕಾರ ಸಂಘದಲ್ಲಿ ಇರುತ್ತದೆ. ನಾನು ಡಿಸೆಂಬರ್ 2022 ರಲ್ಲಿ ಕೆಲಸವನ್ನು ಬಿಟ್ಟಿರುತ್ತೇನೆ. ನನ್ನ ಆರೋಗ್ಯ ಸರಿ ಇಲ್ಲದ ಕಾರಣ ಹಾಗೂ ಗೃಹ ಕೃತ್ಯದ ಅಡಚಣೆಗಾಗಿ ಪಿರ್ಯಾದುದಾರರಿಂದ 2 ಲಕ್ಷದ 10 ಸಾವಿರ ರೂಗಳ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಂದ 2 ಲಕ್ಷದ 10 ಸಾವಿರ ರೂಗಳ ಸಾಲವನ್ನು ಪಡೆದು, 50 ಸಾವಿರ ರೂಗಳನ್ನು 2013 ರಲ್ಲಿ ಪಡೆದಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಭದ್ರತೆಗಾಗಿ ನೀಡಿದ ಚೆಕ್ ಅನ್ನು ಪಿರ್ಯಾದುದಾರರ ಬಳಿ ಕೇಳಿದರೂ ಅವರು ನನಗೆ ನೀಡಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

7. ನನಗೆ ಅಪಘಾತವಾದ ನಂತರವೇ ನಾನು ಪಿರ್ಯಾದುದಾರರಿಂದ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಗೆ 2 ಲಕ್ಷದ 10 ಸಾವಿರ ರೂಗಳನ್ನು ನೀಡಲು ಭಾದ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಆದಾಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಜಮೀನಿನ ಮಾಲೀಕರ ಹೆಸರು ಎಂಬ ಪಟ್ಟಿಯಲ್ಲಿ ನನ್ನ ತಾಯಿಯ ಹೆಸರಿರುತ್ತದೆ ಎಂದರೆ ಸರಿ. ಬೆಳೆ ಮಾರಾಟಕ್ಕೆ ಸಂಬಂಧಿಸಿದ ಬಿಲ್ ಗಳನ್ನು ಹಾಜರುಪಡಿಸಿರುವುದಿಲ್ಲ.

<u>ಮರು ವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.